ಪಿ ಡಬ್ಲ್ಯೂ-1

<u>ಸಾಕ್ಷಿಯನ್ನು ದಿಃ14.10.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು 1 ಮತ್ತು 2 ನೇ ಎದುರುದಾರರ ಪರ ಶ್ರೀ ಆರ್ ಟಿ ಎಸ್ ವಕೀಲರಿಂದಃ</u>**

ಅಪಘಾತವಾದ ದಿನ ನಾನು ಹಿರಿಯೂರಿನಿಂದ ನನ್ನ ಸ್ವಂತ ಊರಾದ ಗೋಗುದ್ದು ಗೋಪಾಲಪುರ ಗ್ರಾಮಕ್ಕೆ ಹೋಗುತ್ತಿದ್ದೆ. ಆ ದಿನ ನಾನು ಮತ್ತು ನನ್ನ ಹೆಂಡತಿ ಕೆಎ.16.ವೈ.6534 ರಲ್ಲಿ ಹೋಗುತ್ತಿದ್ದೆವು. ಸದರಿ ಬೈಕ್ ಗೆ ಆ ದಿನ ವಿಮೆ ಇತ್ತೊ ಇಲ್ಲವೋ ಅನ್ನುವುದು ಗೊತ್ತಿಲ್ಲ. ಅಪಘಾತದ ದಿನ ನನಗೆ ದ್ವಿಚಕ್ರ ವಾಹನ ಚಾಲನಾ ಪರವಾನಿಗೆ ಇತ್ತು ಸದರಿ ಡಿ ಎಲ್ ನ್ಯಾಯಾಲಯದಲ್ಲಿ ಹಾಜರು ಮಾಡಿದ್ದೇನೆ. ಅಪಘಾತವು ಹುಚ್ಚವ್ವನಹಳ್ಳಿ ದಾಟಿ ಒಂದು ಗೇಟ್ ಹತ್ತಿರ ಆಗಿರುತ್ತದೆ. ಅಪಘಾತವು ಮುಖಾ ಮುಖಿ ಆಗಿರುವುದಿಲ್ಲ. ಎದುರಿನಿಂದ ಬರುತ್ತಿದ್ದ ಅಶೋಕ್ ಲೈಲ್ಯಾಂಡ್ ಚಾಲಕನು ವೇಗವಾಗಿ ಬಂದು ಅಪಘಾತ ಮಾಡಿರುತ್ತಾನೆ. ಅಪಘಾತವು ರಸ್ತೆ ಮಧ್ಯದಲ್ಲಿ ಆಗಿಲ್ಲ. ಸಾಕ್ಷಿಯು ಸೈಡ್ ನಲ್ಲಿ ಆಗಿದೆ ಎಂದು ತಿಳಿಸುತ್ತಾರೆ. ಸದರಿ ಮಿನಿ ಲಾರಿ ನಂ.ಕೆಎ.16.ಸಿ.7806 ವಿ ವಿ ಪುರ ಕಡೆಯಿಂದ ಬರುತ್ತಿತ್ತು.

ಅಪಘಾತವಾದ ನಂತರ ಮೊದಲು ಹಿರಿಯೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ನಂತರ ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಪಡೆದಿದ್ದೆನೆ ಇನ್ನೂ ಹೆಚ್ಚಿನ ಚಿಕಿತ್ಸೆಯನ್ನು ಡಾ. ದಿನೇಶ್ ಬಳಿ ಪಡೆದುಕೊಂಡಿದ್ದೇನೆ. ಸದರಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಆಗಿದೆ ಎಂದು ತಿಳಿಸುತ್ತಾರೆ. ನಾನು ನ್ಯಾಯಾಲಯದಲ್ಲಿ ಸಲ್ಲಿಸಿದ ದಾಖಲೆಗಳನ್ನು ಹೊರತು ಪಡಿಸಿ ಬೇರೆದಾಖಲೆ ಇರುವುದಿಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡುತ್ತಾರೆ ಎಂದರೆ ನಿಜ. ಆದರೆ ನನ್ನ ಚಿಕಿತ್ಸೆಗೆ ಹಣ ಖರ್ಚಾಗಿಲ್ಲ ಎಂದರೆ ಸುಳ್ಳು.

ನನಗೆ ವಾರ್ಷಿಕ ರೂ. 5 ಲಕ್ಷ ವ್ಯವಸಾಯದಿಂದ ಆದಾಯವಿದೆ ಎಂದು ತೋರಿಸುವ ದಾಖಲೆ ಹಾಜರು ಮಾಡಿದ್ದೇನೆ. ಸಾಕ್ಷಿಯು ತನಗೆ ಸೇರಿದ ಅಡಿಕೆ ತೋಟ ಇದೆ ಎಂದುತಿಳಿಸುತ್ತಾರೆ. ನಾನು ಮೊದಲಿನಂತೆ ಈಗಲೂ ಸಹ ಎಲ್ಲಾ ಕೆಲಸಗಳನ್ನು ಮಾಡಬಲ್ಲೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಕೆಲಸ ಮಾಡುತ್ತಿದ್ದರೂ ಸಹ ಯಾವುದೇ ಕೆಲಸ ಮಾಡಲು ಆಗುವುದಿಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಸಂಭವಿಸಿದ್ದರೂ ಸಹ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಶರೀಕಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದೆ ಹಾಗಾಗಿ ಇಬ್ಬರು ಎದುರುದಾರರು ಪರಿಹಾರ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.